**ಸಿ.ಸಿ. ನಂ. 4622 /2022 ಪಿ.ಡಬ್ಲ್ಯೂ-2 ಸಿಡಬ್ಲ್ಯೂ-2(ಅಫ್ರೋಸ್ ಪಾಷ)**

**ಸಾಕ್ಷಿಗೆ ದಿನಾಂಕ 04.08.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**<u>ಪಾಟೀಸವಾಲುಃ ಆರೋಪಿತರ ಪರ ಶ್ರೀ ಎನ್ ಆರ್ ವಕೀಲರಿಂದಃ</u>**

ನಾನು ಹಂಪಾಪುರದಲ್ಲಿ ವಾಸಾವಿರುತ್ತೇನೆ. ನಾನು ಹಂಪಾಪುರದಲ್ಲಿ ಹುಟ್ಟಿದ ದಿನದಿಂದಲೂ ವಾಸವಿರುತ್ತೇನೆ. ಆರೋಪಿ ನಮ್ಮ ಗ್ರಾಮದವರೇ ಆಗಿರುತ್ತಾರೆ ಎಂದರೆ ಸರಿ. ಅವರು ಸಹ ನಮ್ಮ ಜೊತೆಯಲ್ಲಿಯೇ ಹುಟ್ಟಿದಾಗಿನಿಂದಲೂ ವಾಸವಿರುತ್ತಾರೆ. ಆರೋಪಿಯು ಚಿಕ್ಕಂದಿನಿಂದಲೂ ನನಗೆ ತಿಳಿದಿರುತ್ತಾರೆ. ಚಾಸಾ 3 ರಿಂದ 7 ರವರು ನಮ್ಮ ಗ್ರಾಮದವರಾಗಿರುತ್ತಾರೆ.

2017 ರಿಂದ ನನಗೆ ಪೇಸ್ ಬುಕ್ಕಿನಲ್ಲಿ ಖಾತೆ ಇರುತ್ತದೆ. ಪೇಸ್ ಬುಕ್ಕಿನಲ್ಲಿ ಆರೋಪಿಯು ಸ್ನೇಹಿತನಾಗಿರುವುದಿಲ್ಲ. ದಿಃ 16.11.2020 ರಂದು ದೀಪಾವಳಿ ಹಬ್ಬದ ದಿನ ನನ್ನ ಮೊಬೈಲ್ ಸಂಖ್ಯೆ 9535591486 ರಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪೇಸ್ ಬುಕ್ ನೋಡುತ್ತಿದ್ದೆನು. ಪೇಸ್ ಬುಕ್ ನಲ್ಲಿ ಬೇರೆ ಖಾತೆದಾರರು ಸ್ನೇಹಿತ ರಲ್ಲದೆ ಇದ್ದರೆ ಅವರ ಖಾತೆಯನ್ನು ನೋಡಲು ಆಗವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಖಾತೆಯಿಂದ ಬೇರೆಯವರ ಪೇಸ್ ಬುಕ್ ಖಾತೆಯನ್ನು ನೋಡಬಹುದು. ನಾನು ಮೇಲೆ ಹೇಳಿದ ಮೊಬೈಲ್ ಸಂಖ್ಯೆಯನ್ನು ಉಪಯೋಗಿಸುತ್ತಿದ್ದ ಮೊಬೈಲ್ ಪೋನನ್ನು ತನಿಖೆಯ ಸಮಯದಲ್ಲಿ ಪೋಲೀಸರಿಗೆ ನೀಡಿರುವುದಿಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಪೋಲೀಸರ ಮುಂದ ದೂರನ್ನು ನೀಡಿರುವುದಿಲ್ಲ. ಪ್ರಕರಣಕ್ಕೆ ಸಂಬಂದಿಸಿದಂತೆ ನನ್ನ ಮೊಬೈಲ್ ಪೋನಿನಿಂದ ಪೋಟೋಗಳನ್ನು ಪ್ರಿಂಟ್ ಮಾಡಿ ಪೋಲೀಸರಿಗೆ ನೀಡಿರುತ್ತೇನೆ. ಸದರಿ ವಿಷಯಕ್ಕೆ ಸಂಬಂದಿಸಿದಂತೆ ನಮ್ಮ ಗ್ರಾಮದಲ್ಲಿ ಯಾವುದೇ ಕೋಮು ಘರ್ಷಣೆ ಆಗಿರುವುದಿಲ್ಲ. ಸದರಿ ವಿಷಯಕ್ಕೆ ಸಂಬಂದಿಸಿದಂತೆ ನಮ್ಮ ಗ್ರಾಮದಲ್ಲಿ ಈ ಹಿಂದೆ ಆರೋಪಿಯ ಕಡೆಯಿಂದ ಗಲಾಟೆ ಯಾಗಿರುವುದಿಲ್ಲ. ಪೇಸ್ ಬುಕ್

ನಲ್ಲಿ ನಮ್ಮ ಹೆಸರನ್ನು ಬಳಸಿಕೊಂಡು ನಕಲಿ ಖಾತೆಯನ್ನು ಮಾಡಬಹುದು ಎಂದರೆ ಸರಿ. ಪೇಸ್ ಬುಕ್ ನಲ್ಲಿ ಲಕ್ಷ್ಮಿ ನಾರಾಯಣ ಆಜಾದ್ ಎಂಬ ಖಾತೆಯನ್ನು ಆರೋಪಿಯ ಹೆಸರಿನಲ್ಲಿ ತೆಗೆದು ಪೋಸ್ಟ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿಗೆ ಯಾವುದೇ ಪೇಸ್ ಬುಕ್ ಖಾತೆ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ತಪ್ಪನ್ನು ಎಸಗದೆ ಇದ್ದರೂ ಸಹ ಆರೋಪಿಯನ್ನು ಈ ಪ್ರಕರಣದಲ್ಲಿ ಸಿಲುಕಿಸಲು ಆರೋಪಿಯ ವಿರುದ್ದು ಸುಳ್ಳು ದೂರು ನೀಡಲಾಗಿರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ